O.S.102/2015 PW-1

ದಿನಾಂಕಃ 06.04.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ನಾನು ವಿಭಾಗಕ್ಕಾಗಿ ದಾವೆಯನ್ನು ಹೂಡಿರುತ್ತೇನೆ. ನನ್ನ ತಾಯಿಗೆ ಒಬ್ಬ ಅಕ್ಕ ಮತ್ತು ಒಬ್ಬ ತಂಗಿ ಇರುತ್ತಾರೆ. ಅವರ ಹೆಸರುಗಳು ತಿಮ್ಮಕ್ಕ ಮತ್ತು ಶಾಂತಮ್ಮ. ನನ್ನ ತಾಯಿಯ ಹೆಸರು ರಂಗಮ್ಮ. ತಿಮ್ಮಕ್ಕ ರವರಿಗೆ ಮೂರು ಜನ ಗಂಡು ಮಕ್ಕಳು ಮತ್ತು ಒಂದು ಹೆಣ್ಣು ಮಗಳು ಇರುತ್ತಾರೆ, ಅವರ ಹೆಸರುಗಳು ಕೆಂಚಮ್ಮ, ಪರಶುರಾಮಯ್ಯ, ಜಯರಾಮಯ್ಯ ಮತ್ತು ತಿಮ್ಮಣ್ಣ. ಕೆಂಚಮ್ಮ ರವರು ಮೃತ ಪಟ್ಟಿರುತ್ತಾರೆ ಎಂದರೆ ಸರಿ. ಆದ್ದರಿಂದ ಅವರ ಮಕ್ಕಳನ್ನು ಸದರಿ ದಾವೆಯಲ್ಲಿ ಸೇರಿಸಿರುತ್ತೇನೆ. ಅವರ ಹೆಸರುಗಳು ಪುಟ್ಟಜುಂಜಯ್ಯ, ಆಲಮ್ಮ ಮತ್ತು ಗಿರಿಜಮ್ಮ. ತಿಮ್ಮಕ್ಕನ ಎರಡನೇ ಮಗನಾದ ಪರಶುರಾಮಯ್ಯ ರವರಿಗೆ ಇಬ್ಬರು ಗಂಡು ಮಕ್ಕಳು ಮತ್ತು ಒಬ್ಬ ಹೆಣ್ಣು ಮಗಳು ಇರುತ್ತಾರೆ. ಪರಶುರಾಮಯ್ಯ ರವರ ಮಗಳಾದ ರೇಣುಕಮ್ಮ ರವರನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ತಿಮ್ಮಕ್ಕರವರ ಮಗನಾದ ಜಯರಾಮಯ್ಯ ರವರಿಗೆ ಇಬ್ಬರು ಮಕ್ಕಳು. ಅದರಿಲ್ಲಿ ಜಯಲಕ್ಷ್ಮಮ್ಮ ರವರನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ತಿಮ್ಮಕ್ಕ ರವರ ಮಗನಾದ ತಿಮ್ಮಯ್ಯ ರವರಿಗೆ ಇಬ್ಬರು ಮಕ್ಕಳು, ಅವರಲ್ಲಿ ಸುಮಿತ್ರಿ ಎಂಬುವವರನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಮೇಲೆ ಹೇಳಿರುವ ಎಲ್ಲಾ ವ್ಯಕ್ತಿಗಳನ್ನು ಯಾಕೆ ಕಕ್ಷೀದಾರರನ್ನಾಗಿ ಮಾಡಿಲ್ಲ ಎಂದರೆ ನನಗೆ ಗೊತ್ತಿರಲಿಲ್ಲ.

ನನ್ನ ತಾಯಿಗೆ ನಾನು ಒಬ್ಬನೇ ಮಗ ಎಂದರೆ ಸರಿ. ನನ್ನ ಚಿಕ್ಕಮ್ಮನಾವರಾದ ಶಾಂತಮ್ಮ ರವರಿಗೆ 2 ಜನ ಗಂಡು ಮಕ್ಕಳು ಹಾಗೂ 3 ಜನ ಹೆಣ್ಣು ಮಕ್ಕಳು, ಅವರ ಹೆಸರುಗಳು ರಂಗಮ್ಮ ಅಲಿಯಾಸ್ ಲಕ್ಷ್ಮಕ್ಕ, ತಿಮ್ಮಕ್ಕ, ರತ್ನಮ್ಮ. ಇವರನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಅವರನ್ನು ದಾವೆಯಲ್ಲಿ ಸೇರಿಸಲು ತೊಂದರೆ ಇಲ್ಲ ಎಂದರೆ ಸರಿ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಶಿರಾ.